## *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್‌ಸಿ.* **258/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಃ ಶ್ರೀ ಶ್ರೀಶೈಲ ಹುಗ್ಗಿ** | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | **ಃ ಶ್ರೀ ಭೀಮಣ್ಣ** | | **05.03.2025** |
| **ವಯಸ್ಸು** | **ಃ 28 ವರ್ಷ** | | |
| **ವೃತ್ತಿ** | **ಃ ಪಿ.ಸಿ, ಹೆಬ್ಬಾಳ್ ಪೋಲೀಸ್ ಠಾಣೆ** | **ಪ್ರಾ.ಸಾ. ಃ 21** | |
| **ವಾಸಸ್ಥಳ** | **ಃ ಹೆಬ್ಬಾಳ್** | **ಚಾ.ಸಾ. ಃ 32** | |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ನವೆಂಬರ್ *2017* ರಿಂದ *2024* ಆಗಸ್ಟ್‌ರವರೆಗೆ ಮೇಟಗಳ್ಳಿ ಪೋಲೀಸ್ ಠಾಣೆಯಲ್ಲಿ ಪಿ.ಸಿ ಆಗಿ ಕೆಲಸ ಮಾಡಿದ್ದೇನೆ. ಆ ಕಾಲಕ್ಕೆ ದಿಃ*25.05.2023* ರಂದು ಮೊ.ಸಂಖ್ಯೆ *56/2023* ಪ್ರಕರಣದಲ್ಲಿ ಮೃತೆಯ ಶವ ತನಿಖೆ ವೇಳೆ ತನಿಖಾಧಿಕಾರಿಯ ಮೌಖಿಕ ಆದೇಶದ ಮೇಲೆ ನನ್ನ ಮೊಬೈಲ್ ನಲ್ಲಿ ಪೊಟೋಗಳನ್ನು ತೆಗೆದಿದ್ದೆ. ಅದೇ ದಿನ ಈ ಪ್ರಕರಣದ ಆರೋಪಿ ಮೋಹನ್ ಕುಮಾರ್ ಇವರು ತೋರಿಸಿದ ಕೃತ್ಯ ನಡೆದ ಸ್ಥಳವಾದ ಸಿದ್ದಲಿಂಗಪುರ ಗ್ರಾಮದ ರಾಘವೇಂದ್ರ ಬೇಕರಿಯಲ್ಲಿ ಮಾಡಿದ ಮಹಜರ್ ಕಾಲಕ್ಕೆ ನನ್ನ ಮೊಬೈಲ್ ನಲ್ಲಿ ಪೊಟೋಗಳನ್ನು ತೆಗೆದಿದ್ದೆ. ಆ ಕಾಲಕ್ಕೆ ಆರೋಪಿ ಹಾಜರುಪಡಿಸಿದ್ದ ರಾಡು, ಸ್ಥಳದಲ್ಲಿ ಬಿದಿದ್ದ ರಕ್ತ, ರಕ್ತ ಹತ್ತಿದ ಮ್ಯಾಟ್ ವಶಕ್ಕೆ ಪಡೆದಿದ್ದರು. ಈಗ ನಾನು ನೋಡುತ್ತಿರುವ ನಿ.ಪಿ*-9* ಆ ಕಾಲಕ್ಕೆ ಮಾಡಿದ್ದ ಮಹಜರ್ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ*-9(ಸಿ)* ಎಂದು ಗುರುತಿಸಿದೆ.

ಕೋರ್ಟ್ ಮುಂದೆ ಇರುವ ಆರೋಪಿತನೇ ಆ ದಿನ ಆ ಸ್ಥಳವನ್ನು ತೋರಿಸಿದ್ದ ವ್ಯಕ್ತಿ ಇರುತ್ತಾನೆ. ನಂತರ ಆ ಪೊಟೋಗಳನ್ನು ಸಿಡಿ ಗೆ ಕಾಫಿ ಮಾಡಿ ಪೊಟೋ ಸ್ಟುಡಿಯೋದಲ್ಲಿ ಪ್ರಿಂಟ್ ಹಾಕಿಸಿ ತನಿಖಾಧಿಕಾರಿಗೆ ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ನಿಪಿ*-4, 5, 12* ರಿಂದ *15* ಎಂದು ಗುರುತಿಸಿರುವ ಪೊಟೋಗಳು ಆ ಎರಡು ಮಹಜರ್ ಕಾಲಕ್ಕೆ ನಾನು ತೆಗೆದ ಪೊಟೋಗಳಿವೆ. ಈಗ ನಾನು ನೋಡುತ್ತಿರುವ ದಾಖಲೆ ನಾನು ಪೊಟೋ ತೆಗೆದಿದ್ದಕ್ಕೆ ನಾನು ಕೊಟ್ಟಿದ್ದ ಕಲಂ *65* ಬಿ ಪ್ರಮಾಣಪತ್ರ ಇದೆ ಮತ್ತು ಅದರಲ್ಲಿ ನನ್ನ ಸಹಿ ಇದೆ. ಸದರಿ ಪ್ರಮಾಪತ್ರವನ್ನು ನಿ.ಪಿ*-29* ಮತ್ತು ಸಹಿಯನ್ನು ನಿ.ಪಿ*-29(*ಎ*)* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಎಂ.ಒ*-5* ರಿಂದ *7* ಆ ದಿನ ಅಮಾನತ್ತು ಪಡಿಸಿಕೊಂಡ ವಸ್ತುಗಳಿವೆ.

ಪಾಟೀ ಸವಾಲು ಃ ಆರೋಪಿ ಪರ ವಕೀಲರವರಿಂದಃ-

*2.* ನನ್ನ ಪೊಟೋ ತೆಗೆದಿದ್ದ ಮೊಬೈಲ್ ಒನ್ ಪ್ಲಸ್ ಮೊಬೈಲ್ ಇತ್ತು. ನನ್ನ ಹೇಳಿಕೆಯಲ್ಲಿ ಮೊಬೈಲ್ ಯಾವ ಕಂಪನಿಯದ್ದು ಎಂದು ಹೇಳಿಲ್ಲ. ಆ ಮೊಬೈಲ್ ನನ್ನ ಹೆಸರಿನಲ್ಲಿದೆ. ಮೊಬೈಲ್ ಕಂಪನಿಯ ಬಗ್ಗೆ ಹೇಳಿಕೆಯಲ್ಲಿ ಹೇಳಿಲ್ಲ. ಮೊಬೈಲ್ ನ ದಾಖಲೆಗಳನ್ನು ನಾನು ತನಿಖಾಧಿಕಾರಿಗೆ ಕೊಟ್ಟಿಲ್ಲ. ಪೊಟೋಗಳನ್ನು ತನಿಖಾಧಿಕಾರಿಯ ಆದೇಶದಂತೆ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೊಬೈಲ್ ನಲ್ಲಿ ಪೊಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ಬೇಕರಿಯ ಒಳಗಡೆ ಇದ್ದ ರಾಡನ್ನು ಹಾಜರುಪಡಿಸಿದ್ದ. ಅದನ್ನು ಘಟನೆ ಸ್ಥಳದ ಒಳಗಡೆ ಇದ್ದ ರೂಂನಿಂದ ತಂದು ಹಾಜರುಪಡಿಸಿದ್ದ. ಘಟನೆ ನಡೆದ ಸ್ಥಳ ಎಷ್ಟು ಉದ್ದ ಮತ್ತು ಅಗಲ ಇದೆ ಎಂದು ಅಳತೆ ಗೊತ್ತಿಲ್ಲ. ಆ ಕಾಲಕ್ಕೆ ಆ ರೂಂನಲ್ಲಿ ಬೇಕರಿಯ ತಿನಿಸುಗಳನ್ನು ತಯಾರಿಸಲು ಉಪಯೋಗಿಸುವ ಕಚ್ಚಾ ವಸ್ತುಗಳು ಮತ್ತು ಯಂತ್ರಗಳು ಇದ್ದವು. ಮಹಜರ್ ನಲ್ಲಿ

ಏನೇನು ವಸ್ತುಗಳು ಇದ್ದವು ಎಂದು ನಮೂದು ಇದೆಯೋ ಇಲ್ಲವೊ ಗೊತ್ತಿಲ್ಲ. ಆ ಸ್ಥಳದಲ್ಲಿ ರಕ್ತದ ಕಲೆ, ರಕ್ತದ ಹತ್ತಿದ ಮ್ಯಾಟ್ ಮತ್ತು ರಾಡು ಇದ್ದವು ಎಂದು ಸೃಷ್ಟಿ ಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ.ಒ–*5* ರಿಂದ *7* ಕ್ಕೂ ಆರೋಪಿತನಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಂದೆ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಆದೇಶದಂತೆ ಪೊಟೋಗಳನ್ನು ಠಾಣೆಯಲ್ಲೇ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**